# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1353 |
| ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸುವ ಯಾತ್ರಿಕರಿಂದ ಖಾಸಗಿ ವಸತಿ ಗೃಹಗಳವರು ದುಪ್ಪಟ್ಟು ದರ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸುವ ಯಾತ್ರಿಕರಿಂದ ಖಾಸಗಿ ವಸತಿ ಗೃಹಗಳವರು ದುಪ್ಪಟ್ಟು ದರ ವಸೂಲಿ ಮಾಡುತ್ತಿರುವುದು ಮತ್ತು ಕಳಪೆ ಸೌಲಭ್ಯಗಳನ್ನು ಒದಗಿಸುತ್ತಿರುವುದರ ಬಗ್ಗೆ ಇಲಾಖೆಯಲ್ಲಿ ಯಾವುದೇ ಅಧಿಕೃತ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ವಸತಿ ಗೃಹಗಳವರು ಕಳಪೆ ಸೌಲಭ್ಯಗಳನ್ನು ಒದಗಿಸುತ್ತಿರುವುದರ ಬಗ್ಗೆ ದೂರುಗಳು ಬಂದಿದೆಯೇ; | |
| ಇ) | ಬಂದಿದ್ದಲ್ಲಿ, ಖಾಸಗಿ ವಸತಿ ಗೃಹಗಳ ಹಾವಳಿಯನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳೇನು; | ಖಾಸಗಿ ವಸತಿ ಗೃಹಗಳ ಹಾವಳಿಯನ್ನು ನಿಯಂತ್ರಿಸುವುದು ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಡುವುದಿಲ್ಲ. |
| ಈ) | ಇಲ್ಲಿ ವಸತಿ ಗೃಹಗಳ ಕೊರತೆ ಇರುವುದರಿಂದ ಹೆಚ್ಚಿನ ವಸತಿ ಗೃಹ ನಿರ್ಮಾಣಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ? | ಪ್ರಸ್ತಾಪಿತ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಯಾತ್ರಾರ್ಥಿಗಳಿಗೆ ವಸತಿ ಗೃಹಗಳ ಸಂಖ್ಯೆಯನ್ನು ಹೆಚ್ಚಿಸಲು ದಿನಾಂಕ:15.02.2025 ರಂದು ಮಾನ್ಯ ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ದೇವಾಲಯದ ಮಾಸ್ಟರ್ ಪ್ಲಾನ್ ಸಮಿತಿಯ 29ನೇ ಸಭೆಯಲ್ಲಿ ಜರೂರಾಗಿ ಆಗಬೇಕಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಅಗತ್ಯ ಕ್ರಮ ವಹಿಸಲಾಗಿದೆ:<br>1. ದೇವಾಲಯದಲ್ಲಿ ಪ್ರಸ್ತುತ 419 ಕೊಠಡಿಗಳಿರುತ್ತವೆ.<br>2. ಭಕ್ತಾಧಿಗಳ ವಾಸ್ತವ್ಯಕ್ಕೆ ವಸತಿ ಗೃಹಗಳ ಬೇಡಿಕೆ ಇರುತ್ತದೆ. ಹಾಗಾಗಿ ಸುಮಾರು 5 ಸಾವಿರ ಕೊಠಡಿಗಳ ಅವಶ್ಯಕತೆ ಇರುವುದನ್ನು ಗಮನಿಸಿ ಮಾಸ್ಟರ್ ಪ್ಲ್ಯಾನ್‌ನ ಪ್ರಥಮ ಹಂತದಲ್ಲಿ 200 ಕೊಠಡಿಗಳ 4 ಬ್ಲಾಕ್ ವಸತಿ ಗೃಹಗಳನ್ನು ಇಂಜಾಡಿಯಲ್ಲಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ನಿರ್ಮಿಸಲು ಮಹಾನಕ್ಷೆಯಲ್ಲಿ ಜಾಗ ಗುರುತಿಸಲಾಗಿದೆ.<br>3. ಸದರಿ ಜಾಗದಲ್ಲಿ 200 ಕೊಠಡಿಗಳ 4 ಬ್ಲಾಕ್ ಕಟ್ಟಡಗಳನ್ನು ದೇವಸ್ಥಾನ ನಿಧಿ ಮತ್ತು ದಾನಿಗಳಿಂದ ಪಡೆದು ನಿರ್ಮಿಸಲು ತೀರ್ಮಾನಿಸಲಾಗಿದೆ.<br>4. ಸದರಿ ತೀರ್ಮಾನದಂತೆ ನಿರ್ಮಾಣ ಕಾಮಗಾರಿಯ ನಿವೇಶನವನ್ನು ಪರಿಶೀಲಿಸಿಕೊಂಡು ಈಗಾಗಲೇ ತಯಾರಿಸಿರುವ ನಕ್ಷೆಗಳನ್ನು ಮರು ಪರಿಶೀಲನೆ ನಡೆಸಿ ಮಿತವ್ಯಯದ ಹಾಗೂ ಬಾಳಿಕೆಯ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಸೂಚಿಸಲಾಗಿದೆ.<br>5. ದೇವಸ್ಥಾನದಲ್ಲಿ ಲಭ್ಯವಿರುವ ದೇವಾಲಯದ ನಿಧಿಯ ಲಭ್ಯತೆಯನ್ನು ಆಧರಿಸಿ ಪ್ರತಿ ಕಟ್ಟಡದ ಪೂರ್ಣ ವೆಚ್ಚದಲ್ಲಿ ಒಂದು ಕೊಠಡಿಗೆ ತಗಲುವ ವೆಚ್ಚವನ್ನು ನಿಗಧಿಪಡಿಸಿಕೊಂಡು ಸಾರ್ವಜನಿಕ ಪ್ರಕಟಣೆ ನೀಡಿ ದೇಣಿಗೆ ಸಂಗ್ರಹಿಸಲು ತೀರ್ಮಾನಿಸಲಾಗಿದೆ.<br>6. ಕಟ್ಟಡಗಳನ್ನು ಎತ್ತರದ G+6 ಮಹಡಿ ಇರುವಂತೆ ನಿರ್ಮಾಣ ಮಾಡಲು ತೀರ್ಮಾನಿಸಲಾಗಿರುತ್ತದೆ.<br>7. ದೇವಸ್ಥಾನದ ಡಾರ್ಮಿಟರಿ 'ಅನಂತ' ಮಾದರಿಯಲ್ಲಿ ಒಂದು ಕೊಠಡಿಯಲ್ಲಿ ಕನಿಷ್ಠ 10 ಜನ ತಂಗುವ ರೀತಿ 50 ಕೊಠಡಿಗಳನ್ನು ಹೊಂದಿರುವ ಡಾರ್ಮಿಟರಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.<br>8. ಸದರಿ ಡಾರ್ಮಿಟರಿಯ ವಿನ್ಯಾಸವು ಮಲಗಲು ಎತ್ತರದ ಪ್ಲ್ಯಾಟ್ ಫಾರಂಗಳನ್ನು ಹಾಗೂ ಲಗೇಜ್ ಬಾಕ್ಸ್ ಹೊಂದಿರುವಂತೆ ನಿರ್ಮಿಸಲು ತೀರ್ಮಾನಿಸಲಾಗಿರುತ್ತದೆ. |

ಸಂಖ್ಯೆ: ಕಂಇ 102 ಮುಸಪ್ರ 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು.